
# ಸಿಯೊಲ್‌ನ ಮಡಿಲು



ಒಂದು ಸೆಕೆಂಡು ತಡವಾದರೂ ಮುಂದಿನ ಅರ್ಧ ಗಂಟೆ ಸಂಬಳ ಕಳೆದುಕೊಳ್ಳುವ ಭೀತಿಯಿಂದ ಗುರುಪಾದ ತಾನು ಉಳಿದುಕೊಂಡ 28ನೇ ಮಹಡಿಯಿಂದ ಎಂದಿಗಿಂತ ಹತ್ತು ನಿಮಿಷ ಮೊದಲೇ ಹೊರಟು ಒಂದನೇ ಮಹಡಿ ತಲುಪಿ ಕೇವಲ ಹನ್ನೆರಡು ನಿಮಿಷದ ಹಾದಿಯಾಗಿರುವ ಆಫೀಸಿನ ದಿಕ್ಕಿನಲ್ಲಿ ನಡೆಯಲಾರಂಭಿಸಿದ. ನಿನ್ನೆಯ ಭಾರಿ ಮಳೆ ಇಂದೂ ನಿಂತಿರಲಿಲ್ಲ. ಕೆಲವು ಸಾರಿ ಹನಿಯಾಗಿ ಕೆಲವು ಸಾರಿ ತುಂಬಾ ಜೋರಾಗಿ ಸಪ್ಪಳ ಮಾಡುತ್ತಿತ್ತು. ಪರಿಸರ ಮಾಲಿನ್ಯದಿಂದ ಉಂಟಾದ ಮೋಡ ಹೋಗಿ ನಿಜವಾದ ಮೋಡ ಆಗಸದಲ್ಲಿ ಕವಿದು ಬೆಳಗಿನ ತಾಜಾ ಅನುಭವಕ್ಕೆ ಸಂಜೆ ಐದರ ಮೆರಗು ಬಂದಿತ್ತು. ಆಗಲೇ ತಲೆಯ ಕೂದಲು ಹಾಗು ಬೆನ್ನಿನ ಮೇಲೆ ಬೆವರಿನ ಮಣಿ ಕಟ್ಟಲು ಶುರು ಮಾಡಿತ್ತು.

ದಕ್ಷಿಣ ಕೊರಿಯಾ ದೇಶದ ಸಿಯೊಲ್ ನಗರದಲ್ಲಿನ ತನ್ನ ಅಪಾರ್ಟ್‌ಮೆಂಟ್‌ನಿಂದ ಕೆಳಗಿಳಿದು ಜೊಂಗ್ನುವಿನ ಉತ್ತರದ ಸೆಜೊಂಗ್ನು ರಸ್ತೆ ಸಮೀಪಿಸುವಾಗ ಯಾವತ್ತೂ ಕಾಣುವ ಬೆಳಬೆಳಿಗ್ಗೆ ತಮ್ಮ ತಮ್ಮ ಮನೆಯಿಂದ ತಂದ ಕುರ್ಚಿಯಲ್ಲಿ ಕೂರುವ ವಯಸ್ಸಾದ ಹೆಂಗಸರು, ಅವರ ಜೊತೆಯಲ್ಲಿ ಮುಕಳಿ ಹರಿದು ವಿನ್ಯಾಸಿಸಿರುವ ಪ್ಯಾಂಟ್ – ಚಡ್ಡಿ ಧರಿಸುವ ಮೊಮ್ಮಕ್ಕಳು, ಕೆಲವು ಸಾರಿ ಸೆಕೆ ತಡೆಯಲಾಗದೆ ತನ್ನ ಅಂಗಿಯನ್ನು ಕಳಚಿ ಹೆಗಲ ಮೇಲೆ ಟವೆಲ್ಲಿನಂತೆ ಇಟ್ಟುಕೊಂಡ ಗಂಡಸರು ಈ ಹುಳುಕು ಮಳೆಯಿಂದಾಗಿ ಕಾಣಲಿಲ್ಲ. ಬೆಳಿಗ್ಗೆ ಇವರೆಲ್ಲರ ಗಿಜಿ ಗಿಜಿ ಇಲ್ಲದಿದ್ದರೆ ಸೆಜೊಂಗ್ನು ರಸ್ತೆಯೆ ಒಂದು ರೀತಿ ಬಿನ್ನಗೆ.

ಗುರುಪಾದ ರಸ್ತೆ ಏರುತ್ತಿದ್ದಂತೆ ಲೆಕ್ಕಕ್ಕೂ ಮೀರಿದ ಕಾರುಗಳು, ಬಸ್ಸುಗಳು ಮಳೆಯಿಂದಾಗಿ ತುಂಬ ನಿಧಾನವಾಗಿ ಚಲಿಸುತ್ತಿದ್ದವು. ಸಾವಿರಕ್ಕೂ ಹೆಚ್ಚು ಬ್ಯಾಟರಿ ಚಾಲಿತ ಸೈಕಲ್ಲುಗಳಲ್ಲಿ ಜನ ಆಫೀಸಿಗೆ ಹೊರಟಿದ್ದರು. ಇನ್ನೊಂದು ಕಡೆ